ಬೋಳು ತಲೆಗೆ ಕೂದಲು ಬರಬೇಕು!

✍️ಶ್ರೀವಲ್ಲಿ ರೈ ಮಾರ್ಟೆಲ್



ಒಬ್ಬ ವ್ಯಕ್ತಿ ತುಂಬಾ ಶ್ರೀಮಂತನಾಗಿದ್ದ. ಅವನ ಬಳಿ ಸಾಕಷ್ಟು ಹಣವಿತ್ತು. ಆದರೆ ಅವನಿಗೆ ಒಂದು ಬೇಸರವಿತ್ತು. ಅವನ ತಲೆಯ ಮೇಲೆ ಕೂದಲು ಇರಲಿಲ್ಲ. ತಾಮ್ರದ ಬಾಣಲೆಯಂತೆ ಹೊಳೆಯುತ್ತಿದ್ದ ಅವನ ಬೋಳು ತಲೆ ಎಲ್ಲರಿಗೂ ಕಾಣಿಸುತ್ತಿತ್ತು. ಜನರು ಅವನನ್ನು ನೋಡಿ, “ಇವನು ಬೋಳು” ಎಂದು ಹೇಳುತ್ತಾ, ಅವನನ್ನು ಗೇಲಿ ಮಾಡುತ್ತಿದ್ದರು.

ಇದರಿಂದ ತುಂಬಾ ಬೇಸರಗೊಂಡ ಅವನು ಒಂದು ದಿನ ಒಬ್ಬ ಪಂಡಿತರ ಬಳಿಗೆ ಹೋಗಿ, “ಎಷ್ಟೇ ಖರ್ಚಾದರೂ ಪರವಾಗಿಲ್ಲ, ನನ್ನ ತಲೆಯ ಮೇಲೆ ದಟ್ಟವಾಗಿ ಕೂದಲು ಬೆಳೆಯಬೇಕು. ಅದಕ್ಕೆ ಯಾವುದಾದರೂ ಔಷಧಿ ಕೊಡಿ” ಎಂದು ಕೇಳಿದನು.

ಇದು ಸಾಧ್ಯವಾಗುವ ವಿಷಯವೇ? ಆದರೂ ಹಣದ ಆಸೆಗೆ ಬಿದ್ದ ಪಂಡಿತರು, "ಇದಕ್ಕೆ ವಿಶೇಷವಾದ ಮದ್ದು ಅರೆಯಬೇಕು. ಒಂದು ತಿಂಗಳು ಸಮಯ ಬೇಕು, ಹತ್ತು ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಈಗ ಐದು ಸಾವಿರ ಕೊಡಿ, ಮದ್ದು ಅರೆದು ಇಡುತ್ತೇನೆ, ತಿಂಗಳ ಕೊನೆಯಲ್ಲಿ ಬನ್ನಿ" ಎಂದು ಐದು ಸಾವಿರ ರೂಪಾಯಿ ಪಡೆದು ಅವನನ್ನು ಕಳುಹಿಸುತ್ತಾರೆ.

ಅವನಿಗೆ ಅತೀವ ಸಂತೋಷವಾಗುತ್ತದೆ. ‘ಇನ್ನೊಂದೇ ತಿಂಗಳು, ಆಮೇಲೆ ತಲೆ ತುಂಬಾ ಕೂದಲು’ ಎಂದು ದಿನ ಎಣಿಸಲು ಪ್ರಾರಂಭಿಸುತ್ತಾನೆ. ತಿಂಗಳ ಕೊನೆಯಲ್ಲಿ ಪಂಡಿತರ ಬಳಿ ಹೋದಾಗ, ಅವರು ಒಂದು ಬಿಳಿ ಬಾಟಲಿಯಲ್ಲಿ ಹಸಿರು ಬಣ್ಣದ ಎಣ್ಣೆಯನ್ನು ನೀಡಿ ಹೀಗೆ ಹೇಳುತ್ತಾರೆ:

"ಇಗೋ ಮಾರಾಯ, ಅತ್ಯಂತ ಕಷ್ಟಪಟ್ಟು ಕಾಂತಾರದ ಕಾಡಿನಲ್ಲಿ ಗಿಡಮೂಲಿಕೆ, ಸೊಪ್ಪುಗಳನ್ನು ಹುಡುಕಿ ತಂದು ತಿಂಗಳಿಡೀ ಕಾಯಿಸಿ ಈ ಎಣ್ಣೆ ಮಾಡಿದ್ದೇನೆ. ಇದು ಅತ್ಯಂತ ದಿವ್ಯವಾದ ಔಷಧ. ಕೂದಲು ಬರಲಿಲ್ಲವೆಂದರೆ ನಾನು ಮದ್ದು ಕೊಡುವುದನ್ನೇ ನಿಲ್ಲಿಸಿಬಿಡುತ್ತೇನೆ" ಎಂದು ಹೇಳಿ ಬಾಕಿ ಐದು ಸಾವಿರ ರೂಪಾಯಿಯನ್ನೂ ಪಡೆದುಕೊಳ್ಳುತ್ತಾರೆ.

ಅವನಿಗೆ ಸಮಾಧಾನವಾಗುತ್ತದೆ. "ನಾಳೆಯಿಂದಲೇ ಎಣ್ಣೆ ಹಚ್ಚಿ, ಚೆನ್ನಾಗಿ ತಿಕ್ಕಿ ಒಂದು ಗಂಟೆ ಬಿಟ್ಟು ಸ್ನಾನ ಮಾಡು. ಮುಂದಿನ ತಿಂಗಳು ತಲೆ ತುಂಬಾ ಕೂದಲು ಬೆಳೆಯುತ್ತದೆ!" ಎಂದು ಬೀಳ್ಕೊಡುವಾಗ ಪಂಡಿತರು ಕರೆದು ಹೀಗೆ ಹೇಳುತ್ತಾರೆ: "ಈ ಎಣ್ಣೆಯನ್ನು ತಲೆಗೆ ಹಚ್ಚಿ ತಿಕ್ಕುವಾಗ ನೀನು ಮಾವಿನ ಮರ ಮತ್ತು ಮಾವಿನ ಹಣ್ಣು ಇವೆರಡನ್ನೂ ಮನಸ್ಸಿನಲ್ಲಿ ನೆನಪಿಸಿಕೊಳ್ಳಬಾರದು. ನೆನೆದರೆ ಈ ಎಣ್ಣೆ ಕೆಲಸ ಮಾಡುವುದಿಲ್ಲ!"
"ಅಷ್ಟೇ ತಾನೇ, ನೆನಪಿಸಿಕೊಳ್ಳದಿದ್ದರೆ ಆಯಿತು" ಎಂದು ಹೇಳಿ ಆತ ಅಲ್ಲಿಂದ ಹೊರಡುತ್ತಾನೆ.
ಮರುದಿನ ಬೆಳಿಗ್ಗೆ ತಲೆಗೆ ಎಣ್ಣೆ ಹಚ್ಚಲು ಕುಳಿತುಕೊಳ್ಳುತ್ತಾನೆ. ಬಾಟಲಿಯ ಮುಚ್ಚಳ ತೆಗೆಯುವಾಗಲೇ ಪಂಡಿತರು ಹೇಳಿದ "ಮಾವಿನ ಮರ ಮತ್ತು ಮಾವಿನ ಹಣ್ಣು" ನೆನಪಿಗೆ ಬರುತ್ತದೆ!
"ಛೇ! ಹಾಳಾಯಿತು!" ಎಂದು ಬಾಟಲಿಯ ಮುಚ್ಚಳ ಮುಚ್ಚಿ, ‘ಆಮೇಲೆ ಹಚ್ಚಿದರಾಯಿತು’ ಎಂದು ಒಳಗಿಡುತ್ತಾನೆ.
ನೀವು ನಂಬುವುದಿಲ್ಲ, ಅವನಿಗೆ ಇಂದಿನವರೆಗೂ ಆ ಎಣ್ಣೆಯನ್ನು ತಲೆಗೆ ಹಚ್ಚಲು ಸಾಧ್ಯವಾಗಲೇ ಇಲ್ಲ. ಎಣ್ಣೆ ಹಚ್ಚಲು ಹೋದಾಗಲೆಲ್ಲಾ ಮಾವಿನ ಮರ ಮತ್ತು ಮಾವಿನ ಹಣ್ಣು ನೆನಪಾಗಿ, ತೆಗೆದ ಮುಚ್ಚಳವನ್ನು ಮತ್ತೆ ಮುಚ್ಚಿಡುತ್ತಾನೆ. ತೆಗೆಯುವುದು, ಮುಚ್ಚುವುದು... ಇಂದಿನವರೆಗೂ ಇದೇ ಕಥೆಯಾಗಿದೆ!
ಎಣ್ಣೆಯನ್ನೇ ಹಚ್ಚಲು ಆಗದಿರುವಾಗ ತಲೆಯಲ್ಲಿ ಕೂದಲು ಮೂಡುವುದಾದರೂ ಹೇಗೆ? ಹಣವನ್ನು ಹಿಂತಿರುಗಿ ಕೇಳೋಣವೆಂದರೆ, ಇದರಲ್ಲಿ ಪಂಡಿತರದ್ದು ಯಾವ ತಪ್ಪೂ ಕಾಣಿಸುತ್ತಿಲ್ಲ!

ನೀತಿ:

1. ನಮಗೆ ಯಾವುದನ್ನು ಮಾಡಬಾರದು ಎಂದು ಹೇಳಲಾಗುತ್ತದೆಯೋ, ಅದೇ ವಿಷಯ ನಮ್ಮ ಮನಸ್ಸಿನಲ್ಲಿ ಇನ್ನಷ್ಟು ಗಟ್ಟಿಯಾಗಿ ನೆಲೆಯಾಗುತ್ತದೆ.
2. ಇರುವುದನ್ನು ಇರುವಂತೆಯೇ ಸ್ವೀಕರಿಸಿಕೊಂಡು ಜೀವನದಲ್ಲಿ ಮುಂದೆ ಸಾಗುವುದನ್ನು ಕಲಿಯಬೇಕು.
3. ಮನುಷ್ಯನ ದೌರ್ಬಲ್ಯಕ್ಕೆ ತಕ್ಕಂತೆ ಔಷಧಿ ತಯಾರಿಸುವವರು ಸಮಾಜದಲ್ಲಿ ಯಾವಾಗಲೂ ಇರುತ್ತಾರೆ.